# ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ಬೆಂಗಳೂರು

ಅನುಸೂಚಿ-ಎ ೫

(ಉಪವಿಧಿ ಸಂಖ್ಯೆ : 4.1)

## ನಕ್ಷೆ ಮಂಜೂರಾತಿ ಪತ್ರ

ಕ್ರಮ ಸಂಖ್ಯೆ:ಬೆಂಅಪ್ರಾ/ನಮ/ಅಸ/ಅಅ-1/ತಾಸ-2/ದ/16/2017-18
ದಿನಾಂಕ: 16-11-2017.

ಆಯುಕ್ತರವರ ಕಛೇರಿ,
ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ,
ಬೆಂಗಳೂರು.

ಶ್ರೀಮತಿ/ಶ್ರೀ

**M/s. Salarpuria Housing Pvt. Ltd.,**
**GPA Holder of Sri K.M. Srinivasamurthy,**
**Salarpuria Windsor,**
**#03, 4th floor, Halasur main road,**
**Bangalore – 560 042.**

ಮಾನ್ಯರೆ,

**ವಿಷಯ:** ಬೆಂಗಳೂರು ದಕ್ಷಿಣ ತಾಲ್ಲೂಕು, ಉತ್ತರಹಳ್ಳಿ ಹೋಬಳಿ, ಮಲ್ಲಸಂದ್ರ ಗ್ರಾಮದ ಸರ್ವೆ ನಂ. 10/3, 11/1, 11/2 ರಲ್ಲಿ ನಿರ್ಮಿಸಲು ಉದ್ದೇಶಿಸಿರುವ ಬಹುವಸತಿ ಸಮುಚ್ಛಯ ಕಟ್ಟಡ ಮತ್ತು ಕ್ಲಬ್‌ಹೌಸ್ ಕಟ್ಟಡದ ನಕ್ಷೆಗೆ ಮಂಜೂರಾತಿ ನೀಡುವ ಕುರಿತು.

**ಉಲ್ಲೇಖ:** 1. ನಿಮ್ಮ ಅರ್ಜಿ ದಿನಾಂಕ: 17.10.2017.
2. ಮಾನ್ಯ ಆಯುಕ್ತರ ಆದೇಶ ಸಂಖ್ಯೆ: 5167, ದಿನಾಂಕ: 03-11-2017 / 08-11-2017.

******

ಬೆಂಗಳೂರು ದಕ್ಷಿಣ ತಾಲ್ಲೂಕು, ಉತ್ತರಹಳ್ಳಿ ಹೋಬಳಿ, ಮಲ್ಲಸಂದ್ರ ಗ್ರಾಮದ ಸರ್ವೆ ನಂ. 10/3, 11/1, 11/2 ರಲ್ಲಿ ನಿರ್ಮಿಸಲು ಉದ್ದೇಶಿಸಿರುವ ಬಹುವಸತಿ ಸಮುಚ್ಛಯ ಕಟ್ಟಡ ಮತ್ತು ಕ್ಲಬ್‌ಹೌಸ್ ಕಟ್ಟಡದ ನಕ್ಷೆಗಳಗೆ ಮಂಜೂರಾತಿ ನೀಡುವ ಕುರಿತು ಅರ್ಜಿದಾರರಾದ M/s Salarpuria Housing Pvt. Ltd., ರವರು ಅರ್ಜಿ ಸಲ್ಲಿಸಿದ್ದು, ಉಲ್ಲೇಖ (2) ರಂತೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಮಾನ್ಯ ಆಯುಕ್ತರು **ಆದೇಶ ಸಂಖ್ಯೆ: 5167, ದಿನಾಂಕ: 03-11-2017 / 08-11-2017** ರಲ್ಲಿ ಸದರಿ ನಕ್ಷೆಯನ್ನು ಅನುಮೋದನೆ ಮಾಡಿರುತ್ತಾರೆ. ಅದರಂತೆ ಅರ್ಜಿದಾರರು ನಕ್ಷೆ ಮಂಜೂರಾತಿ ಶುಲ್ಕ ರೂ. 02,51,52,909/- ಗಳನ್ನು ಕೆನರಾ ಬ್ಯಾಂಕ್ ಚಲನ್ ಸಂಖ್ಯೆ:6038, ದಿ:14.11.2017 ರಂದು ಪ್ರಾಧಿಕಾರಕ್ಕೆ ಪಾವತಿಸಿರುತ್ತಾರೆ. ಆದುದರಿಂದ, ಮಲ್ಲಸಂದ್ರ ಗ್ರಾಮದ ಸರ್ವೆ ನಂ. 10/3, 11/1, 11/2 ರಲ್ಲಿ ಈ ಕೆಳಕಂಡಂತೆ ನಿರ್ಮಿಸಲು ಉದ್ದೇಶಿಸಿರುವ:

| Building Details | No. of Floors | No. of Units |
|---|---|---|
| Building-1 (Tower-1) | 2BF+GF+13UF | 47 Units |
| Building-2 (Tower-2 to Tower-11) | 2BF+GF+13UF | 750 Units |
| Club house | GF+2UF | - |
| **TOTAL** | | **797 Units (Including 86 EWS Units)** |

ಬಹುವಸತಿ ಸಮುಚ್ಛಯ ಕಟ್ಟಡ ಮತ್ತು ಕ್ಲಬ್‌ಹೌಸ್ ಕಟ್ಟಡದ ನಕ್ಷೆಗಳಗೆ ಈ ಕೆಳಗೆ ನಮೂದಿಸಿರುವ ಷರತ್ತುಗಳನ್ನು ಪಾಲಿಸುವ ನಿಬಂಧನೆಗೊಳಪಟ್ಟು ನಕ್ಷೆಗೆ ಮಂಜೂರಾತಿ ನೀಡಲಾಗಿದೆ. ಈ ಮಂಜೂರಾತಿಯು **ದಿನಾಂಕ: 16-11-2017 ರಿಂದ ದಿನಾಂಕ: 15-11-2019** ವರೆಗಿನ ಎರಡು ವರ್ಷಗಳ ಅವಧಿಗೆ ಮಾತ್ರ ಮಾನ್ಯತೆ ಪಡೆದಿರುತ್ತದೆ ಎಂದು ಈ ಮೂಲಕ ತಮಗೆ ತಿಳಿಸಲಾಗಿದೆ.

..2

## ಪಾಲಿಸಬೇಕಾದ ಷರತ್ತುಗಳು

1) ಕಡ್ಡಾಯವಾಗಿ ಕಟ್ಟಡಗಳಲ್ಲಿ ಕೆಲಸ ನಿರ್ವಹಿಸುವ ಕಾರ್ಮಿಕರುಗಳಿಗೆ ತಾತ್ಕಾಲಿಕವಾಗಿ ಶೌಚಾಲಯಗಳನ್ನು ನಿರ್ಮಿಸಿದ ನಂತರವೇ ಕಟ್ಟಡದ ಕಾಮಗಾರಿಗಳನ್ನು ಪ್ರಾರಂಭಿಸುವಂತೆ ಹಾಗೂ ಕಟ್ಟುನಿಟ್ಟಾಗಿ ಪಾಲಿಸುವಂತೆ ಸೂಚಿಸಿದೆ.
2) ಪ್ರಾಧಿಕಾರದಿಂದ ಮಂಜೂರಾದ ನಕ್ಷೆಯ ಪ್ರತಿಯನ್ನು ಕಟ್ಟಡ ನಿರ್ಮಾಣ ಮಾಡುವ ಸ್ಥಳದಲ್ಲಿ ಕಡ್ಡಾಯವಾಗಿ ಪ್ರದರ್ಶಿಸತಕ್ಕದ್ದು.
3) ಪ್ರಾಧಿಕಾರದಿಂದ ಮಂಜೂರಾದ ನಕ್ಷೆಯ ಪ್ರಕಾರ ಕಟ್ಟಡ ನಿರ್ಮಾಣ ಮಾಡತಕ್ಕದ್ದು.
4) ಕಟ್ಟಡ ನಿರ್ಮಾಣಕ್ಕೆ ಸಂಬಂಧಿಸಿದಂತೆ ವಿವಿಧ ಇಲಾಖೆಗಳು ನೀಡಿದ ನಿರಾಕ್ಷೇಪಣಾ ಪತ್ರದಲ್ಲಿ ವಿಧಿಸಿದ ಷರತ್ತುಗಳನ್ನು ಚಾಚೂ ತಪ್ಪದೇ ಪಾಲಿಸುವುದು. ತಪ್ಪಿದಲ್ಲಿ ಸ್ವಾಧೀನಾನುಭವ ಪತ್ರ (Occupation Certificate) ಪಡೆಯುವ ನಿಮ್ಮ ಕೋರಿಕೆಯನ್ನು ಗಣನೆಗೆ ತೆಗೆದುಕೊಳ್ಳಲಾಗುವುದಿಲ್ಲ.
5) ಅಭಿವೃದ್ಧಿದಾರರು ಭದ್ರತಾ ಸಿಬ್ಬಂದಿಯವರನ್ನು ನೇಮಿಸಿ ಕಟ್ಟಡದ ಪ್ರವೇಶ ದ್ವಾರದಲ್ಲಿ ಒಳಬರುವ ಹಾಗೂ ಹೊರಹೋಗುವ ವಾಹನಗಳಿಗೆ ಪ್ರತ್ಯೇಕ ವ್ಯವಸ್ಥೆಯನ್ನು ಕಲ್ಪಿಸಿ ಸಾರ್ವಜನಿಕರಿಗೆ ಹಾಗೂ ವಾಹನ ಸಂಚಾರಕ್ಕೆ ತೊಂದರೆಯಾಗದಂತೆ ನೋಡಿಕೊಳ್ಳುವುದು.
6) ಕಟ್ಟಡ ಮಂಜೂರಾತಿಯ ಕುರಿತು ಕಾರ್ಮಿಕ ಇಲಾಖೆ ಅಥವಾ ಪ್ರಾಧಿಕಾರ, ನಿರ್ದೇಶನ ನೀಡಿದಲ್ಲಿ ಅರ್ಜಿದಾರರು ವ್ಯತ್ಯಾಸದ ಹಣವನ್ನು ಭರಿಸತಕ್ಕದ್ದು.
7) ಕಟ್ಟಡ ನಿರ್ಮಾಣ ವೆಚ್ಚವು ಪ್ರತೀ ಚದರ ಅಡಿಗೆ 650/- ಕ್ಕಿಂತ ಹೆಚ್ಚಾದಲ್ಲಿ ಕಾರ್ಮಿಕ ಕಲ್ಯಾಣ ನಿಧಿಗೆ ಅಂದಾಜು ಮೊತ್ತದ ಶೇ 01 % ರಷ್ಟು ಮೊತ್ತವನ್ನು ಪ್ರಾಧಿಕಾರಕ್ಕೆ ಭರಿಸತಕ್ಕದ್ದು.
8) ಅರ್ಜಿದಾರರು ಕಟ್ಟಡ ನಕ್ಷೆ ಮಂಜೂರಾತಿ ಸಮಯದಲ್ಲಿ ಬಾಕಿ ಇರುವ ಯಾವುದೇ ಅಭಿವೃದ್ಧಿ ಶುಲ್ಕ ಅಥವಾ ಇನ್ನಾವುದೇ ಶುಲ್ಕಗಳನ್ನು ಬಿಬಿಎಂಪಿ/ಬಿಡಿಎ ಸಂಸ್ಥೆಗಳಿಗೆ ಕಟ್ಟಡ ಪ್ರಾರಂಭಿಸುವ ಮೊದಲು ಸಂದಾಯ ಮಾಡತಕ್ಕದ್ದು.
9) ಅರ್ಜಿದಾರರು ಕಾಮಗಾರಿ ಪ್ರಾರಂಭಿಸುವ ಮೊದಲು ಕಾಮಗಾರಿ ಪ್ರಾರಂಭಿಕ ಪ್ರಮಾಣ ಪತ್ರ ಹಾಗೂ ಕಾಮಗಾರಿ ಮುಕ್ತಾಯದ ನಂತರ ಸ್ವಾಧೀನಾನುಭವ ಪತ್ರವನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಪಡೆಯುವುದು ಕಡ್ಡಾಯವಿರುತ್ತದೆ.
10) ಅರ್ಜಿದಾರರು ಕಟ್ಟಡಕ್ಕೆ ಬೇಕಾದ ವಿದ್ಯುಚ್ಚಕ್ತಿಯ ಪರ್ಯಾಯ ವ್ಯವಸ್ಥೆಗಾಗಿ ಸೋಲಾರ್ ಉಪಕರಣಗಳನ್ನು ಅಳವಡಿಸಿಕೊಳ್ಳತಕ್ಕದ್ದು.
11) ಕಟ್ಟಡದ ಗುಣಮಟ್ಟ, ಸುರಕ್ಷತೆ ಹಾಗೂ ವಿನ್ಯಾಸಗಳಿಗೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಯಾವುದೇ ರೀತಿಯಿಂದ ಜವಾಬ್ದಾರರಾಗಿರುವುದಿಲ್ಲ. ಈ ಅಂಶಗಳ ಪೂರ್ಣ ಜವಾಬ್ದಾರಿಯು ಅಭಿವೃದ್ಧಿದಾರರದ್ದೇ ಆಗಿರುತ್ತದೆ.
12) ಯೋಜನೆಯಲ್ಲಿ ಮಳೆ ನೀರು ಕೊಯ್ಲುಗಾಗಿ ಸೂಕ್ತ ವ್ಯವಸ್ಥೆಯನ್ನು ಕಲ್ಪಿಸಿಕೊಂಡು ಗೃಹ ಹಾಗೂ ಇನ್ನಿತರೆ ಉಪಯೋಗಗಳಿಗಾಗಿ ಬಳಸಲು ಅವಕಾಶ ಕಲ್ಪಿಸಿಕೊಳ್ಳತಕ್ಕದ್ದು.
13) ಕುಡಿಯುವ ನೀರು ಹಾಗೂ ಬಳಸುವ ನೀರಿಗಾಗಿ ಪ್ರತ್ಯೇಕ ಪೈಪ್ ಲೈನುಗಳನ್ನು (Dual Piping System) ಅಳವಡಿಸುವುದು.
14) ಅಭಿವೃದ್ಧಿದಾರರು ಒಳಚರಂಡಿ ವ್ಯವಸ್ಥೆ ಕಾಮಗಾರಿಯನ್ನು ಸಂಬಂಧಪಟ್ಟ ಇಲಾಖೆಗೆ (BWSSB & DB) ನಿಗಧಿಪಡಿಸಿದ ಹಣವನ್ನು ಸಂಧಾಯ ಮಾಡಿ ಇಲಾಖೆಯವರ ಮಾರ್ಗದರ್ಶನದಲ್ಲಿ ನಿರ್ವಹಿಸುವುದು.
15) ಅರ್ಜಿದಾರರು Occupancy Certificate ಅನ್ನು ಪಡೆಯಲು ಪ್ರಾಧಿಕಾರಕ್ಕೆ ಅರ್ಜಿ ಸಲ್ಲಿಸುವ ಸಮಯದಲ್ಲಿ ನೀರು ಸರಬರಾಜು ಕಾಮಗಾರಿಗಳು Sewage Treatment Plant ಹಾಗೂ Rain Water Harvesting ಅನ್ನು ನಿಯಮಕ್ಕನುಗುಣವಾಗಿ ನಿರ್ವಹಿಸಿರುವ ಬಗ್ಗೆ BWSSB ಯಿಂದ ದೃಢೀಕರಣ ಪತ್ರವನ್ನು ಸಲ್ಲಿಸುವುದು. ಹಾಗೆಯೇ ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿಯಿಂದಲೂ ಸಹ ಯೋಜನೆಯ ಸಮರ್ಪಕ ಅನುಷ್ಠಾನದ ಬಗ್ಗೆ ದೃಢೀಕರಣ ಪತ್ರವನ್ನು ಸಲ್ಲಿಸುವುದು.
16) ಅರ್ಜಿದಾರರು Buffer Zone ನಲ್ಲಿ ಗಿಡಗಳನ್ನು ನೆಡುವುದು ಕಡ್ಡಾಯವಿರುತ್ತದೆ.
17) ಪ್ರಶ್ನಿತ ಪ್ರದೇಶಕ್ಕೆ ಲಗತ್ತಾಗಿರುವ ಉಪಗಮನ ರಸ್ತೆಯನ್ನು ಅರ್ಜಿದಾರರ ಪ್ರದೇಶದ ಎರಡು ಬದಿಗಳಲ್ಲಿ ಕನಿಷ್ಠ 100 ಮೀ ಉದ್ದಕ್ಕೆ ಅರ್ಜಿದಾರರ ಸ್ವತಃ ವೆಚ್ಚದಲ್ಲಿ ಅಭಿವೃದ್ಧಿಪಡಿಸುವುದು.

Next page....

Housiey.com

18) ಪ್ರಧಾನ ಕಾರ್ಯದರ್ಶಿಗಳು, ಕಾರ್ಮಿಕ ಇಲಾಖೆ ಬೆಂಗಳೂರು ರವರ ದಿನಾಂಕ: 04-03-2006 ರಂದು ವಿಧಿಸಿದ ಷರತ್ತುಗಳಿಗೆ ಅರ್ಜಿದಾರರು ಭದ್ಧರಾಗಿರತಕ್ಕದ್ದು.

19) ಅರ್ಜಿದಾರರು ಯಾವುದೇ ರೀತಿಯ ಪ್ಲಾಸ್ಟಿಕ್, ಪೇಪರ್, ಗಾರ್ಬೇಜ್ ಇತ್ಯಾದಿ ತ್ಯಾಜ್ಯಗಳನ್ನು ಸಂಗ್ರಹಿಸಿ Dry waste ಮತ್ತು Wet waste ಅನ್ನು ಬೇರ್ಪಡಿಸಿ ನಿಗಧಿತ ಸ್ಥಳಕ್ಕೆ ಸಾಗಿಸಲು ಸೂಕ್ತ ವ್ಯವಸ್ಥೆಯನ್ನು ಕಡ್ಡಾಯವಾಗಿ ಮಾಡಿಕೊಳ್ಳತಕ್ಕದ್ದು.

20) ಅರ್ಜಿದಾರರು ನೀರು ಸರಬರಾಜಿಗಾಗಿ ಸಂಬಂಧಪಟ್ಟ ಇಲಾಖೆಯನ್ನು (BWSSB) ಅವಲಂಬಿಸದೇ ನೀರಿಗಾಗಿ ತಮ್ಮ ಸ್ವಂತ ವ್ಯವಸ್ಥೆ ಮಾಡಿಕೊಳ್ಳುವುದು.

21) ಅಭಿವೃದ್ಧಿದಾರರು ಬೆಟರ್ ಮೆಂಟ್ ತೆರಿಗೆ ಪಾವತಿಸುವ ಕುರಿತು ಮಾನ್ಯ ಉಚ್ಛ ನ್ಯಾಯಾಲಯದ ನೀಡುವ 45727-45730/2011 (ಬೆಂಅಪ್ರಾ), ದಿನಾಂಕ: 03.09.2012ರ ತೀರ್ಮಾನದ ವಿರುದ್ಧ ಪ್ರಾಧಿಕಾರವು ಮೇಲ್ಮನವಿ ಸಲ್ಲಿಸಲು ತೀರ್ಮಾನಿಸಿದ್ದು, ಮೇಲ್ಮನವಿಯ ಕುರಿತು ನ್ಯಾಯಾಲಯ ನೀಡುವ ತೀರ್ಪಿಗೆ ಬದ್ಧರಾಗಿರಲು ಷರತ್ತಿಗೆ ಒಳಪಡಿಸಲಾಗಿದೆ.

22) ಅಭಿವೃದ್ಧಿದಾರರು ವಿದ್ಯುತ್ ಚ್ಛಕ್ತಿ ಟ್ರಾನ್ಸ್ ಫಾರ್ಮರ್, RWH, SWM, Garbage Yard ಹಾಗೂ S.T.P. ಗಾಗಿ (ಮಂಜೂರಾದ ನಕ್ಷೆಯಲ್ಲಿ ತೋರಿಸಿದಂತೆ) ಮೀಸಲಿರಿಸಿದ ಜಾಗದಲ್ಲಿಯೇ ಅದನ್ನು ಸ್ಥಾಪಿಸುವುದು.

23) ಅಭಿವೃದ್ಧಿದಾರರು ಯೋಜನೆ/ಕಟ್ಟಡ ನಿರ್ಮಾಣಕ್ಕಾಗಿ ಅಗತ್ಯ ವಿನ್ಯಾಸಗಳನ್ನು ತಯಾರಿಸಿಕೊಳ್ಳಲು ಕರ್ನಾಟಕ ರಾಜ್ಯ ಸರ್ಕಾರದಿಂದ ನೊಂದಾಯಿತ Structural Engineer ರವರನ್ನು ನೇಮಿಸಿಕೊಂಡು ಅಗತ್ಯ ತಾಂತ್ರಿಕ ವಿನ್ಯಾಸಗಳನ್ನು ತಯಾರಿಸಿಕೊಂಡು ಕಟ್ಟಡ ನಿರ್ಮಾಣ ಕಾರ್ಯವನ್ನು ಕೈಗೊಳ್ಳತಕ್ಕದ್ದು, Structural Engineer ರವರಿಂದ ನಮೂನೆ-2 ರಲ್ಲಿ ಪ್ರಮಾಣ ಪತ್ರವನ್ನು (Affidavit) ಸ್ವಾಧೀನಾನುಭವ ಪತ್ರ ಪಡೆಯುವ ಸಮಯದಲ್ಲಿ ಕಟ್ಟಡವನ್ನು ನಿರ್ಮಿಸಿರುವ ಬಗ್ಗೆ ಕಡ್ಡಾಯವಾಗಿ ಸಲ್ಲಿಸತಕ್ಕದ್ದು.

24) ಅಭಿವೃದ್ಧಿದಾರರು ಯೋಜನೆ/ಕಟ್ಟಡ ನಿರ್ಮಾಣ ಕಾರ್ಯವನ್ನು ಸರ್ಕಾರದಿಂದ ನೊಂದಾಯಿತ ವಿನ್ಯಾಸಕಾರರಿಂದ (Architect) ಪೂರೈಸುವುದು ಹಾಗೂ ಕಟ್ಟಡ ಕಾಮಗಾರಿ ಪೂರ್ಣಗೊಂಡ ನಂತರ ವಿನ್ಯಾಸಕಾರರಿಂದ Completion Certificate ಪಡೆದು ಸಲ್ಲಿಸುವುದು.

25) ಅರ್ಜಿದಾರರು ಕಟ್ಟಡದಲ್ಲಿನ ವಿದ್ಯುತ್ತೀಕರಣ ಕಾಮಗಾರಿಗಳನ್ನು ಸರ್ಕಾರದಿಂದ ನೊಂದಾಯಿತ Electrical Contractor ರವರಿಂದ ಪೂರೈಸುವುದು.

Housiey.com

26) ಅರ್ಜಿದಾರರು ಕಟ್ಟಡ ನಿರ್ಮಾಣ ಸಮಯದಲ್ಲಿ ಕಟ್ಟಡ ನಿರ್ಮಾಣ ಸಾಮಗ್ರಿಗಳಿಂದಾಗಲೀ ಇನ್ನಾವುದೇ ಸಾಮಗ್ರಿಗಳಿಂದಾಗಲೀ ಸಾರ್ವಜನಿಕರಿಗೆ ಹಾಗೂ ಪರಿಸರಕ್ಕೆ ಯಾವುದೇ ತೊಂದರೆಯಾಗದಂತೆ ಸೂಕ್ತ ಬ್ಯಾರಿಕೇಂಡಿಂಗ್ ವ್ಯವಸ್ಥೆ ಮಾಡಿಕೊಂಡು ನಿರ್ಮಾಣ ಕಾರ್ಯ ಕೈಗೊಳ್ಳತಕ್ಕದ್ದು, ತಪ್ಪಿದ್ದಲ್ಲಿ ನಿಯಮಾನುಸಾರ ಕ್ರಮಕೈಗೊಳ್ಳಲಾಗುವುದು.

27) ಅರ್ಜಿದಾರರು ನಕ್ಷೆ ಮಂಜೂರಾತಿಗಾಗಿ ಯಾವುದೇ ತಪ್ಪು ದಾಖಲೆಗಳನ್ನೇನಾದರು ಸಲ್ಲಿಸಿರುವುದು ಕಂಡುಬಂದಲ್ಲಿ ಮಂಜೂರಾದ ನಕ್ಷೆಯು ತನ್ನಿಂತಾನೆ ರದ್ದಾಗುತ್ತದೆ ಹಾಗೂ ಕಾನೂನು ರೀತ್ಯಾ ಸೂಕ್ತ ಕ್ರಮ ಜರುಗಿಸಲಾಗುವುದು.

28) ಕಟ್ಟಡ ನಿರ್ಮಾಣದ ಸಮಯದಲ್ಲಿ ಸೆಂಟ್ರಿಂಗ್ ಅಥವಾ ಇನ್ನಿತರೆ ಕಾರಣಗಳಿಂದ ಏನಾದರೂ ಅನಾಹುತ ಸಂಭವಿಸಿದಲ್ಲಿ ಅದಕ್ಕೆ ಅರ್ಜಿದಾರರು ಸಂಪೂರ್ಣ ಜವಾಬ್ದಾರರಾಗಿರುತ್ತಾರೆ. ನಕ್ಷೆ ಮಂಜೂರಾತಿ ನೀಡಿದ ಇಲಾಖೆಯು ಜವಾಬ್ದಾರರಾಗಿರುವುದಿಲ್ಲ.

29) ಪ್ರಾರಂಭಿಕ ಪ್ರಮಾಣ ಪತ್ರ ಕೋರಿ ಮನವಿ ಸಲ್ಲಿಸುವ ಸಮಯದಲ್ಲಿ KSPCB ಸಂಸ್ಥೆಯಿಂದ CFE ಪತ್ರವನ್ನು ಪಡೆದು ಸಲ್ಲಿಸಬೇಕಿರುತ್ತದೆ.

30) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಆಗಿಂದಾಗ್ಗೆ ವಿಧಿಸುವ ಷರತ್ತುಗಳಿಗೆ ಅರ್ಜಿದಾರರು ಬದ್ಧರಾಗಿರತಕ್ಕದ್ದು.

ಆಯುಕ್ತರ ಪರವಾಗಿ
ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಹುದ್ದೆಯ ಹೆಸರು.

**ಪ್ರತಿಯನ್ನು:** ಕಾರ್ಯಪಾಲಕ ಅಭಿಯಂತರರು (ದಕ್ಷಿಣ) ರವರಿಗೆ ಮಾಹಿತಿಗಾಗಿ ಹಾಗೂ ಮುಂದಿನ ಸೂಕ್ತ ಕ್ರಮಕ್ಕಾಗಿ ರವಾನಿಸಿದೆ.

Housiey.com